ಕೂರಿಸುತ್ತಿದ್ದ ಸೋದರಮಾವ.

"ಇದು ಹೀಗೆ ತಲೆಗೆ ಸುತ್ಕೊಳ್ಳುತ್ತೇಂತ ನಂಗೇನಾದ್ರೂ ಕನಸು ಬಿದ್ದಿತ್ತಾ? ಯಾವ ಜನ್ಮದ ಋಣ ತೀರಿಸ್ಕೊಳ್ಳೋಕೆ ಗಂಟು ಬಿದ್ದಿದ್ಯೋ?" ಅನ್ನುತ್ತಿದ್ದಳು ಅಜ್ಜಿ.

"ನೀವಿದೀರಿ ಸರಿ. ನೀವೇನಾದ್ರೂ ಪೆಟ್ಟಿಗೆ ಕಟ್ಟಿದ್ರೆ ಪುಗಸಟ್ಟೆ ಇದನ್ನ ಸಾಕ್ತೀವಿ ಅಂದ್ಕಂಡಿದೀರಾ? ಕಾಲು ಕಟ್ಟಿ ಹೊತ್ಕಂಡ್ಹೋಗಿ ಅಪ್ಪನ ಮನೇಲಿ ಬಿಸಾಕಿ ಬರ್ತೀವಿ. ಇದ್ರೆ ಇರುತ್ತೆ, ಸತ್ರೆ ಸಾಯುತ್ತೆ..." ನಾಲಿಗೆ ಸಡಿಲ ಬಿಡುತ್ತಿದ್ದಳು ಅತ್ತೆ.

"ಹಾಗೇ ಮಾಡಿ. ಎಲ್ಲೀವರೆಗೆ ಕುತ್ತಿಗೆಗೆ ಕುಂಟೆ ಕಟ್ಕೊಂಡಿರೋಕಾಗುತ್ತೆ?" ಉತ್ತರಿಸುತ್ತಿದ್ದಳು ಅಜ್ಜಿ.

ಸೋದರಮಾವನ ಮಕ್ಕಳೊಂದಿಗೆ ಸ್ಕೂಲಿಗೆ ಹೋಗಿ ನಳಿನಿ ಎಸ್ಸೆಸ್ಸೆಲ್ಸಿ ಮುಗಿಸಿಕೊಂಡಳು. ತನ್ನ ಹೆಣ್ಣು, ಗಂಡುಮಕ್ಕಳಿಬ್ಬರನ್ನು ಪೇಟೆಯ ಕಾಲೇಜಿಗೆ ಸೇರಿಸಿದ ಸೋದರಮಾವ ನಳಿನಿಯ ಕಡೆ ಮುಖ ತಿರುಗಿಸಿ ನೋಡಲಿಲ್ಲ. ಮುಂದೆ ಓದಬೇಕೆಂದು ಕುತ್ತಿಗೆಯವರೆಗೆ ಆಸೆ ಇಟ್ಟುಕೊಂಡಿದ್ದ ನಳಿನಿ ಅಜ್ಜಿಯ ಮುಂದೆ ಗೋಗರೆದಿದ್ದಳು,

"ನನ್ನೂ ಕಾಲೇಜಿಗೆ ಸೇರ್ಸೋಕೆ ಹೇಳು ಅಜ್ಜೀ. ನಂಗೂ ಓದೋಕೆ ಆಸೆ ಉಂಟು..."

"ಅಷ್ಟು ಆಸೆ ಇದ್ರೆ ನಿನ್ನಪ್ಪನ ಹತ್ರ ಹೋಗಿ ಹೇಳು. ಇಲ್ಲೇನು ದುಡ್ಡಿನ ಗಿಡ ನೆಟ್ಟಿದಾರಾ? ನಿನ್ನ ಇಷ್ಟು ಓದಿಸಿದ್ದೇ ದೊಡ್ಡ ಪುಣ್ಯ..." ಯಾವ ಮುಲಾಜಿಲ್ಲದೆ ನಿಷ್ಠುರವಾಗಿ ಹೇಳಿದ್ದಳು ಅಜ್ಜಿ. ಸೋದರಮಾವನ ಮುಂದೆ ತನ್ನ ಕೋರಿಕೆಯನ್ನು ನಿವೇದಿಸಿಕೊಳ್ಳುವ ಧೈರ್ಯ ಅವಳಿಗೆ ಬಂದಿರಲಿಲ್ಲ. ಹಾಗೆ ಬೇಡಿಕೊಂಡರೂ ಸೋದರಮಾವ ಇದಕ್ಕೆ ಸೊಪ್ಪು ಹಾಕುವುದಿಲ್ಲ ಎನ್ನುವ ಸತ್ಯ ಅವಳಿಗೆ ಗೊತ್ತಿದೆ. ಅಜ್ಜಿ ಹೇಳಿದಂತೆ ಅಪ್ಪನ ಹತ್ತಿರ ಹೋಗಿ ಈ ವಿಚಾರ ಪ್ರಸ್ತಾಪ ಮಾಡಬೇಕೆಂದು ಹತ್ತು ಸಲ ಯೋಚಿಸಿದಳು ಹುಡುಗಿ. ಯಾಕೋ ಆ ಧೈರ್ಯವೂ ಬರಲಿಲ್ಲ. ಇದನ್ನೇ ನೆಪ ಮಾಡಿಕೊಂಡು ತನ್ನನ್ನು ಅಪ್ಪನ ಮನೆಗೆ ತಳ್ಳಿಬಿಟ್ಟರೆ ಎನ್ನುವ ಭೀತಿ. ಅಲ್ಲಿರುವ ಇಬ್ಬರು ತಂಗಿಯರು, ಒಬ್ಬ ತಮ್ಮನ ಕಣ್ಣಲ್ಲಿ ಇವಳು ಯಾರೋ ಪರಕೀಯಳು. ಅಜ್ಜಿಯ ಜೊತೆ ಅಪರೂಪಕ್ಕೆ ಅಲ್ಲಿಗೆ ಹೋದಾಗ ಇವಳನ್ನು ಹತ್ತಿರ ಬಿಟ್ಟುಕೊಳ್ಳದೆ ತಮ್ಮದೇ ಗುಂಪು ಕಟ್ಟಿಕೊಂಡು ಗುಸುಗುಸು ಪಿಸಪಿಸ ಚುಡಾವಣೆಯ ಮಾತಾಡಿಕೊಳ್ಳುತ್ತಿದ್ದವರು ಅವರು. ನಳಿನಿಯ ಜೊತೆ ಯಾವತ್ತೂ ಅವರು ಪಂಕ್ತಿಯಲ್ಲಿ ಕೂತು ಊಟ ಮಾಡಿದವರಲ್ಲ. ಒಂದೋ ಮೊದಲು, ಅಥವಾ ಆಮೇಲೆ. ಬೇರೆಯೇ ಮನೆಯಲ್ಲಿ ಬೆಳೆದವಳ ಜೊತೆ ಅವರಿಗೆ ವಾಂಛಲ್ಯವಾದರೂ ಹೇಗೆ ಬಂದೀತು? ಹೆತ್ತವರ ಕಣ್ಣಲ್ಲಿ ಎಲ್ಲಾ ಮಕ್ಕಳೂ ಒಂದೇ ಅನ್ನುವ ಹೇಳಿಕೆ ಮಾತು ಗೊತ್ತಿದೆ ನಳಿನಿಗೆ. ಆದರೆ ಇದನ್ನು ಒಪ್ಪಲು ಅವಳು ಅವಳು ಯಾವತ್ತೂ ಸಿದ್ಧಳಿಲ್ಲ. ಕೆಲವರ ಮೇಲೆ ಪ್ರೀತಿ ಕೊಂಚ ಹೆಚ್ಚು, ಕೆಲವರ ಮೇಲೆ ಕೊಂಚ ಕಡಿಮೆ ಎನ್ನುವುದೂ ಅವಳ ಮಟ್ಟಿಗೆ ಸತ್ಯವಾಗಿಲ್ಲ. 'ಕೆಲವರು ಹೆತ್ತವರಿಗೆ ಬೇಕಾಗಿಯೇ ಇಲ್ಲ' ಅನ್ನುತ್ತದೆ ಅವಳ ಅನುಭವ. ಆ ಮನೆಯವರ ಜೊತೆ ತನಗೆ ಹೊಂದಾಣಿಕೆಯಾಗಲು ಸಾಧ್ಯವೇ ಇಲ್ಲ ಎಂದು ಅವಳು ಕಂಡುಕೊಂಡುಬಿಟ್ಟಿದ್ದಾಳೆ. ಹೆತ್ತವರಿಗೆ ತಾನು ಯಾಕೆ ಬೇಡ ಎನ್ನುವ ಬಗ್ಗೆ ಸಾಕಷ್ಟು ತಲೆ ಕೆಡಿಸಿಕೊಂಡಿದ್ದಾಳೆ ನಳಿನಿ. ಚಿಕ್ಕಂದಿನಿಂದ ಹೊರಹೊರಗೇ ಬೆಳೆದವಳ ಕುರಿತು ಅವರಿಗೆ ಪ್ರೀತಿ ಹುಟ್ಟಲೇ ಇಲ್ಲವಾ? ಅಥವಾ ಇನ್ನಿಬ್ಬರು ಹೆಣ್ಣುಮಕ್ಕಳಿರುವುದರಿಂದ ಒಂದು ತಲೆನೋವು ಕಮ್ಮಿಯಾದರೆ ಅಷ್ಟೇ ಲಾಭ ಎನ್ನುವ ಭಾವನೆಯೇ? ತಮ್ಮದೇ ಮಗಳ ಕುರಿತು ಯಾರಾದರೂ ಹೀಗೆಲ್ಲಾ ಯೋಚಿಸುತ್ತಾರೆಯೇ? ಜೊತೆಯಲ್ಲಿರುವ ತಮ್ಮ ಹೆಣ್ಣುಮಕ್ಕಳ ಕುರಿತು ಅಮ್ಮನಿಗೆ ಲಘುಭಾವನೆಯೇನಿಲ್ಲ. ಅವರೂ ಅಷ್ಟೇ, ಅಮ್ಮನೆಂಬ ಸದರದಿಂದ ಅವಳೊಡನೆ ಸಲೀಸಾಗಿ ನಡೆದುಕೊಳ್ಳುತ್ತಾರೆ. ಬೈದರೆ ಬೈಸಿಕೊಂಡು ಆ ಬೈಗುಳವನ್ನು ಅಲ್ಲಲ್ಲೇ ಕೊಡವಿಕೊಳ್ಳುತ್ತಾ,